# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>**Part – IVA** | ಬೆಂಗಳೂರು, **ಗುರುವಾರ**, ೨೧ ಆಗಸ್ಟ್, ೨೦೨೫ (ಶ್ರಾವಣ ೩೦, ಶಕವರ್ಷ ೧೯೪೭)<br>**BENGALURU, THURSDAY, 21 AUGUST, 2025 (SHRAVANA 30, SHAKAVARSHA 1947)** | ನಂ. ೪೯೪<br>**No. 494** |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–61)**

ಕರ್ನಾಟಕ ಭೂಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ.–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು, ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ**,** 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

2. **127ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 127ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ,-

(i) ಖಂಡ (ಡಿ)ಯಲ್ಲಿ ''ನಿಯಮಿಸಬಹುದಾದಂಥ'' ಎಂಬ ಪದಗಳಿಗೆ ಮೊದಲು ''ಕೊಡಗು ಜಿಲ್ಲೆಯಲ್ಲಿನ ಜಮ್ಮಾ ಬಾಣೆ ಹಿಡುವಳಿಗಳಿಗೆ ಸಂಬಂಧಿಸಿದಂತೆ ಅವಿಭಕ್ತ ಕುಟುಂಬ ಸದಸ್ಯರ ವಿವರಗಳನ್ನು ಒಳಗೊಂಡು ಆದರೆ ಅದಕ್ಕೆ ನಿರ್ಬಂಧಿಸದಂತೆ'' ಎಂಬ ಪದಗಳನ್ನು ಸೇರಿಸತಕ್ಕದ್ದು ;

(ii) ಹಾಗೆ ತಿದ್ದುಪಡಿ ಮಾಡಲಾದ ಖಂಡ (ಡಿ) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

''(ಇ) 2ನೇ ಪ್ರಕರಣದ (20)ನೇ ಉಪ-ಪ್ರಕರಣ, 80ನೇ ಪ್ರಕರಣ ಮತ್ತು 79ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳಿಗೆ ಅಸಂಗತವಲ್ಲದ ಮತ್ತು ಅವಿಭಕ್ತ ಕುಟುಂಬದ ಎಲ್ಲಾ ಅಧಿಭೋಗದಾರರ ಹೆಸರುಗಳ ಅನುಸಾರ, ಕೊಡಗು ಜಿಲ್ಲೆಯಲ್ಲಿ ಜಮ್ಮಾ ಬಾಣೆ ಭೂಮಿಗಳಿಗೆ ಸಂಬಂಧಿಸಿದಂತೆ ನಿಯಮಿಸಲಾದ ವಿಧಾನದಲ್ಲಿನ ಅಂಥ ಇತರ ಸೇರ್ಪಡೆಗಳು, ರದ್ದತಿಗಳು ಮತ್ತು ಸರಿಪಡಿಸುವಿಕೆಗಳು.''

**3. 128ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 128ನೇ ಪ್ರಕರಣದಲ್ಲಿ,-

(i) ಉಪ-ಪ್ರಕರಣ (1)ರಲ್ಲಿ ''ಅಥವಾ ಇತರ ರೀತಿಯಿಂದ'' ಎಂಬ ಪದಗಳಿಗೆ ಮೊದಲು ''ಕೊಡಗು ಜಿಲ್ಲೆಯ ಜಮ್ಮಾ ಬಾಣೆ ಭೂಮಿಗಳನ್ನು ಹೊಂದಿರುವ ಅವಿಭಕ್ತ ಕುಟುಂಬದ ಸದಸ್ಯರನ್ನು ಒಳಗೊಂಡಂತೆ'' ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಉಪ-ಪ್ರಕರಣ (4)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(5) ಸರ್ಕಾರವು, 2013ರ ಫೆಬ್ರುವರಿ 1 ರಿಂದ ಯಾರೇ ವ್ಯಕ್ತಿಯು ಆತನ ಅವಿಭಕ್ತ ಕುಟುಂಬದ ಇತರ ಸದಸ್ಯರ ಜೊತೆಗೆ ಯಾವುದೇ ಜಮ್ಮಾ ಬಾಣೆ ಹಿಡುವಳಿಯಲ್ಲಿನ ಸ್ವಾಧೀನದ ಹಿತಾಸಕ್ತಿಗೆ ಸಂಬಂಧಿಸಿದಂತೆ, ಅರ್ಜಿಯನ್ನು ಅಥವಾ ಅನ್ಯಥಾ ಸ್ವೀಕರಿಸಿದ ಮೇಲೆ ಹಾಗೂ ಅಂಥ ವಿಚಾರಣೆ ಮತ್ತು ನಿಯಮಿಸಲಾದ ದಸ್ತಾವೇಜುಗಳ ಪರಿಶೀಲನೆಯ ತರುವಾಯ, ಕೊಡಗು ಜಿಲ್ಲೆಯ ಅಧಿಕೃತಗೊಳಿಸಿದ ಕಂದಾಯ ಅಧಿಕಾರಿ(ಗಳು) ಅರ್ಜಿದಾರನಿಗೆ ಮತ್ತು ಆತನ ಅವಿಭಕ್ತ ಕುಟುಂಬದ ಇತರ ಸದಸ್ಯರಿಗೆ, ವರದಿಯಾದ ಲಿಖಿತ ಸ್ವೀಕೃತಿಯನ್ನು ಒದಗಿಸುವಂತೆ ಅಧಿಕೃತಗೊಳಿಸತಕ್ಕದ್ದು".

**4. 129ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 129ನೇ ಪ್ರಕರಣದ ಉಪ-ಪ್ರಕರಣ (7)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(8) ಕೊಡಗು ಜಿಲ್ಲೆಯ ಜಮ್ಮಾ ಬಾಣೆ ಹಿಡುವಳಿಗಾಗಿ ಸರ್ಕಾರವು ನೇಮಕ ಮಾಡಿದ ಅಧಿಕೃತಗೊಳಿಸಲಾದ ಅಧಿಕಾರಿಯು, 128ನೇ ಪ್ರಕರಣದ ಉಪ-ಪ್ರಕರಣ (4)ರಡಿಯಲ್ಲಿ ಸಲ್ಲಿಸಲಾದ ಯಾವುದೇ ವರದಿ ಅಥವಾ ಸ್ವೀಕರಿಸಿದ ಅರ್ಜಿಯನ್ನು, ಹಕ್ಕು-ಬದಲಾವಣೆ (mutation) ರಿಜಿಸ್ಟರ್-ನಲ್ಲಿ ನಮೂದು ಮಾಡತಕ್ಕದ್ದು ಮತ್ತು 129ನೇ ಪ್ರಕರಣದ ಉಪ-ಪ್ರಕರಣ (2), (3), (4), (5), (6) ಮತ್ತು (7)ರ ಉಪಬಂಧಗಳ ಅನುಸಾರವಾಗಿ ಮುಂದುವರಿಯತಕ್ಕದ್ದು".

**5. 130ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 130ನೇ ಪ್ರಕರಣದ ಉಪ-ಪ್ರಕರಣ (3)ರ ಈಗಾಗಲೇ ಇರುವ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ಕೊಡಗು ಜಿಲ್ಲೆಯ ಜಮ್ಮಾ ಬಾಣೆ ಭೂಮಿಗಳಿಗೆ ಸಂಬಂಧಿಸಿದಂತೆ, ಅಂಥ ಬಾಧ್ಯತೆಯನ್ನು ವಂಶವೃಕ್ಷ, ಉತ್ತರ ಜೀವಿತಾಧಿಕಾರ (survivorship), ವಾರಸು (inheritance) (ಕಾಲ್ಪನಿಕವಾದ ಅಥವಾ ಅನ್ಯಥಾ), ಪರಭಾರೆ ಅಥವಾ ವಿಶೇಷ ಸವಲತ್ತುಗಳು, ಅಡಮಾನ, ಗೇಣಿ ಮತ್ತು ಅವಿಭಕ್ತ ಕುಟುಂಬದ ವಿವರಗಳ ಕುರಿತಾದ ಮಾಹಿತಿ ಮತ್ತು ದಸ್ತಾವೇಜುಗಳಿಗೆ ವಿಸ್ತರಿಸತಕ್ಕದ್ದು".

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಜಮ್ಮಾ ಬಾಣೆ ಭೂ ಹಿಡುವಳಿ ವ್ಯವಸ್ಥೆಯು ಕೊಡಗು ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ರಾಜ್ಯದ ಇತರ ವರ್ಗಗಳ ಭೂಮಿಗಿಂತ ಭಿನ್ನವಾದ ವಿಶೇಷ ರೀತಿಯ ಹಿಡುವಳಿಯಾಗಿರುತ್ತದೆ. ಹಕ್ಕುಗಳ ದಾಖಲೆಯಲ್ಲಿ ಸ್ಪಷ್ಟ ನಮೂದುಗಳಿಲ್ಲದೆಯೂ, ಐತಿಹಾಸಿಕವಾಗಿ ಈ ಭೂಮಿಗಳನ್ನು ಅವಿಭಕ್ತ ಕುಟುಂಬಗಳ ಸದಸ್ಯರು ಸಾಂಪ್ರದಾಯಿಕ ಹಕ್ಕುಗಳ ಆಧಾರದ ಮೇಲೆ ಹೊಂದಿರುತ್ತಾರೆ ಮತ್ತು ಅನುಭವಿಸುತ್ತಿದ್ದಾರೆ. ಕಾಲಾಂತರದಲ್ಲಿ, ಜಮ್ಮಾ ಬಾಣೆ ಹಿಡುವಳಿಗಳಿಗೆ ಸಂಬಂಧಿಸಿದಂತೆ ಮಾಲೀಕತ್ವ, ವಾರಸು, ಉತ್ತರ ಜೀವಿತಾಧಿಕಾರ ಮತ್ತು ಪರಭಾರೆಗಳ ನಿಖರವಾದ ದಾಖಲೆಗಳನ್ನು ನಿರ್ವಹಿಸುವಲ್ಲಿ ಸಂಕೀರ್ಣತೆಗಳು ಉದ್ಭವಿಸಿವೆ.

ನಿರ್ದಿಷ್ಟವಾಗಿ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12) ರಲ್ಲಿ ಅಂಥ ಹಿಡುವಳಿಗಳಲ್ಲಿ ಅವಿಭಕ್ತ ಕುಟುಂಬ ಸದಸ್ಯರ ಹಕ್ಕುಗಳನ್ನು ದಾಖಲಿಸಲು ಸ್ಪಷ್ಟ ಉಪಬಂಧಗಳು ಇಲ್ಲದೆಯೇ ಹಕ್ಕು-ಬದಲಾವಣೆ, ನೋಂದಣಿ, ವಾರಸು ಮತ್ತು ಕಂದಾಯ ದಾಖಲೆಗಳ ನಿರ್ವಹಣೆಯಲ್ಲಿ ತೊಂದರೆಗಳುಂಟಾಗಿದೆ. ಜಮ್ಮಾ ಬಾಣೆ ಭೂಮಿಗೆ ಸಂಬಂಧಿಸಿದ ಉತ್ತರಾಧಿಕಾರ, ಪರಭಾರೆ ಮತ್ತು ವಿಶೇಷ ಸವಲತ್ತುಗಳ ಕುರಿತು ಹಲವಾರು ವಿವಾದಗಳು ಉದ್ಭವಿಸಿದ್ದು, ಇದರಿಂದ ತಪ್ಪಿಸಬಹುದಾದ ವ್ಯಾಜ್ಯ ಮತ್ತು ಆಡಳಿತಾತ್ಮಕ ವಿಳಂಬಕ್ಕೆ ಕಾರಣವಾಗಿದೆ.

ಆದ್ದರಿಂದ ಕೊಡಗು ಜಿಲ್ಲೆಯಲ್ಲಿ ಜಮ್ಮಾ ಬಾಣೆ ಭೂ ಹಿಡುವಳಿಯ ವಿಶಿಷ್ಟ ಸ್ವರೂಪವನ್ನು ಶಾಸನಬದ್ಧವಾಗಿ ಗುರುತಿಸುವುದು ಮತ್ತು ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರ ಹಕ್ಕುಗಳನ್ನು ಹಕ್ಕು-ಬದಲಾವಣೆ ಮತ್ತು ಕಂದಾಯ ರಿಜಿಸ್ಟರುಗಳಲ್ಲಿ ಯುಕ್ತವಾಗಿ ದಾಖಲಿಸಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿದೆ. ನಿರ್ದಿಷ್ಟವಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12)ರ ಪ್ರಕರಣ 127, 128, 129 ಮತ್ತು 130ಕ್ಕೆ ತಿದ್ದುಪಡಿ ಮಾಡಲು ಈ ಮುಂದಿನಂತೆ ಪ್ರಸ್ತಾವಿಸಲಾಗಿದೆ,-

1. ಜಮ್ಮಾ ಬಾಣೆ ಹಿಡುವಳಿಗಳಿಗೆ ಸಂಬಂಧಿಸಿದಂತೆ ಅವಿಭಕ್ತ ಕುಟುಂಬದ ಸದಸ್ಯರ ವಿವರಗಳನ್ನು ಹಕ್ಕು-ಬದಲಾವಣೆ ರಿಜಿಸ್ಟರಿನಲ್ಲಿ ಸೇರಿಸುವುದನ್ನು ಕಡ್ಡಾಯಗೊಳಿಸುವುದು.

2. ಅಂಥ ಭೂಮಿಯಲ್ಲಿ ಅವಿಭಕ್ತ ಕುಟುಂಬದ ಸದಸ್ಯರಾಗಿ ಹಕ್ಕುಗಳನ್ನು ಸ್ವಾಧೀನಪಡಿಸಿಕೊಂಡ ವರದಿಯನ್ನು ಅಗತ್ಯಪಡಿಸುವುದು.

3. ಕೊಡಗು ಜಿಲ್ಲೆಯಲ್ಲಿ ಅಂಥ ಹಕ್ಕುಗಳ ವಿಚಾರಣೆಯನ್ನು ನಡೆಸಲು ಮತ್ತು ಅನುಮತಿಸಲು ಗೊತ್ತುಪಡಿಸಿದ ಕಂದಾಯ ಅಧಿಕಾರಿಗಳಿಗೆ ಅಧಿಕಾರವನ್ನು ನೀಡುವುದು.

4. ಹಕ್ಕು-ಬದಲಾವಣೆ ರಿಜಿಸ್ಟರಿನಲ್ಲಿ ಅಂಥ ಹಕ್ಕುಗಳ ಸೂಕ್ತ ನೋಂದಣಿಗಾಗಿ ಉಪಬಂಧ ಕಲ್ಪಿಸುವುದು ಮತ್ತು ವಂಶವೃಕ್ಷ, ಉತ್ತರ ಜೀವಿತಾಧಿಕಾರ, ವಾರಸು ಮತ್ತು ವಿಶೇಷ ಸವಲತ್ತುಗಳಿಗೆ ಸಂಬಂಧಿಸಿದ ಸುಸಂಗತ ಮಾಹಿತಿಯನ್ನು ಖಚಿತಪಡಿಸಿಕೊಳ್ಳುವುದು.

ಅಧಿನಿಯಮದ ಇತರ ಉಪಬಂಧಗಳಿಗೆ ಅನುಗುಣವಾಗಿ ಸ್ಪಷ್ಟತೆಯನ್ನು ತರಲು, ವ್ಯಾಜ್ಯಗಳನ್ನು ಕಡಿಮೆ ಮಾಡಲು ಮತ್ತು ಜಮ್ಮಾ ಬಾಣೆ ಭೂಮಿಗಳ ಎಲ್ಲಾ ಪಾಲುದಾರರ ಹಕ್ಕುಗಳನ್ನು ರಕ್ಷಿಸಲು ಈ ತಿದ್ದುಪಡಿಗಳು ಪ್ರಯತ್ನಿಸುತ್ತವೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ
## ಕರ್ನಾಟಕ ಭೂ ಕಂದಾಯ ಅಧಿನಿಯಮ, 1964
## (1964ರ ಕರ್ನಾಟಕ ಅಧಿನಿಯಮ ಸಂ. 12)ರ
## ಉದ್ಧೃತ ಭಾಗ

**XXX XXX XXX**

**127. ಹಕ್ಕು ದಾಖಲೆ.-** (1) ಪ್ರತಿಯೊಂದು ಗ್ರಾಮದ ಬಗೆಗೂ, ನಿಯಮಿಸಿದ ರೀತಿಯಲ್ಲಿ ಹಕ್ಕು ದಾಖಲೆಯನ್ನು ತಯಾರಿಸತಕ್ಕದ್ದು ಮತ್ತು ಅಂಥ ದಾಖಲೆಯಲ್ಲಿ ಈ ಕೆಳಗಿನ ವಿವರಗಳು ಇರತಕ್ಕದ್ದು,-

(ಎ) ಭೂಮಿಯ ಹಿಡುವಳಿದಾರರು, ಅಧಿಭೋಗದಾರರು, ಒಡೆಯರು, ಅಡಮಾನಪಡೆದವರು, ಮಾಲೀಕರು ಅಥವಾ ಗೇಣಿದಾರರು ಆಗಿರುವ ವ್ಯಕ್ತಿಗಳ ಅಥವಾ ಆ ಭೂಮಿಯ ಗೇಣಿಯ ಅಥವಾ ಕಂದಾಯದ ಸಂದಾಯವನ್ನು ಯಾರಿಗೆ ಹಸ್ತಾಂತರಿಸಲಾಗಿದೆಯೋ ಆ ವ್ಯಕ್ತಿಗಳ ಹೆಸರುಗಳು:

(ಬಿ) ಅಂಥ ವ್ಯಕ್ತಿಗಳಿಗೆ ಇರುವ ಆಯಾ ಹಿತಾಸಕ್ತಿಯ ಸ್ವರೂಪ ಮತ್ತು ವ್ಯಾಪ್ತಿ ಮತ್ತು ಅದಕ್ಕೆ ಸಂಬಂಧಪಟ್ಟ ಷರತ್ತುಗಳು ಅಥವಾ ಹೊಣೆಗಳು (ಯಾವುವಾದರೂ, ಇದ್ದರೆ):

(ಸಿ) ಅಂಥ ವ್ಯಕ್ತಿಗಳಲ್ಲಿ ಯಾರಾದರೂ ಅಥವಾ ಯಾರಿಗಾದರೂ (ಯಾವುದಾದರೂ) ಸಂದಾಯ ಮಾಡಬೇಕಾಗಿರುವ ಗೇಣಿ ಅಥವಾ ಕಂದಾಯ (ಯಾವುದಾದರೂ ಇದ್ದರೆ); ಮತ್ತು

(ಡಿ) ನಿಯಮಿಸಬಹುದಾದಂಥ ಇತರ ವಿವರಗಳು.

(2) ನಿಯಮಿಸಬಹುದಾದಂಥ ಪ್ರದೇಶಗಳಲ್ಲಿ ನಿಯಮಿಸಬಹುದಾದಂಥ ಅಧಿಕಾರಿಗಳು ಹಕ್ಕು ದಾಖಲೆಗಳನ್ನು ಇಟ್ಟಿರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ಅಧಿಕಾರಿಗಳನ್ನು ಗೊತ್ತುಪಡಿಸಬಹುದು.

(3) ಯಾವುದೇ ಗ್ರಾಮದ ಬಗ್ಗೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಹಕ್ಕು ದಾಖಲೆಯ ತಯಾರಿಕೆಯು ಪೂರ್ಣವಾದಾಗ, ಹಾಗೆ ಅದು ಪೂರ್ಣಗೊಂಡ ಸಂಗತಿಯನ್ನು ರಾಜ್ಯಪತ್ರದಲ್ಲಿ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕದ್ದು.

**XXX XXX XXX**

**128. ಹಕ್ಕುಗಳ ಆರ್ಜನೆಯನ್ನು ವರದಿ ಮಾಡುವುದು.-** (1) ಉತ್ತರಾಧಿಕಾರ, ಉತ್ತರ ಜೀವಿತಾಧಿಕಾರ, ವಾರಸು, ಪಾಲು, ಖರೀದಿ, ಅಡಮಾನ, ದಾನ, ಗೇಣಿ-ಇವುಗಳ ಮೂಲಕ ಅಥವಾ ಇತರ ರೀತಿಯಿಂದ, ಭೂಮಿಯ ಹಿಡುವಳಿದಾರನಾಗಿ, ಅಧಿಭೋಗದಾರನಾಗಿ, ಒಡೆಯನಾಗಿ, ಅಡಮಾನ ಪಡೆದವನಾಗಿ, ಮಾಲೀಕನಾಗಿ ಅಥವಾ ಗೇಣಿದಾರನಾಗಿ ಅಥವಾ ಅದರ ಗೇಣಿಯನ್ನು

ಅಥವಾ ಕಂದಾಯವನ್ನು ಪಡೆಯುವ ಹಕ್ಕನ್ನು ಪಡೆದುಕೊಂಡಿರುವವನಾಗಿ ಯಾವುದೇ ಹಕ್ಕನ್ನು ಆರ್ಜಿಸುವ ಯಾರೇ ವ್ಯಕ್ತಿಯು, ಅಂಥ ಆರ್ಜನೆಯ ದಿನಾಂಕದಿAದ ಮೂರು ತಿಂಗಳೊಳಗಾಗಿ ಆ ಗ್ರಾಮದಲ್ಲಿ ನಿಯಮಿಸಿದ ಅಧಿಕಾರಿಗೆ ಅಂಥ ತನ್ನಹಕ್ಕಿನ ಆರ್ಜನೆಯ ಬಗ್ಗೆ ಹೇಳಿ ಅಥವಾ ಮೌಕಿಕವಾಗಿ ವರದಿ ಮಾಡತಕ್ಕದ್ದು ಮತ್ತು ಸದರಿ ಅಧಿಕಾರಿಯು ಆ ವರದಿ ತಲುಪಿದ ಬಗ್ಗೆ ಹಾಗೆ ವರದಿ ಮಾಡುವ ವ್ಯಕ್ತಿಗೆ ಕೂಡಲೇ ಲಿಖಿತ ಸ್ವೀಕೃತಿ ಕೊಡತಕ್ಕದ್ದು:

ಪರಂತು, ಆ ಹಕ್ಕನ್ನು ಆರ್ಜಿಸುವ ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿದ್ದರೆ ಅಥವಾ ಇತರ ರೀತಿಯಿಂದ ಅನರ್ಹನಾಗಿದ್ದರೆ, ಅವನ ಪಾಲಕನು ಅಥವಾ ಅವನ ಸ್ವತ್ತಿನ ಸ್ವಾಧೀನಹೊಂದಿರುವ ಇತರ ವ್ಯಕ್ತಿಯು ನಿಯಮಿಸಿದ ಅಧಿಕಾರಿಗೆ ವರದಿ ಮಾಡತಕ್ಕದ್ದು:

ಮತ್ತು ಪರಂತು, ನೋಂದಾಯಿತ ದಸ್ತಾವೇಜಿನ ಮೇರೆಗೆ ಹಕ್ಕನ್ನು ಆರ್ಜಿಸುವ ಯಾರೇ ವ್ಯಕ್ತಿಗೆ ನಿಯಮಿಸಿದ ಅಧಿಕಾರಿಗೆ ವರದಿ ಮಾಡುವ ಜವಾಬ್ದಾರಿಯಿಂದ ವಿನಾಯಿತಿ ಕೊಡತಕ್ಕದ್ದು.

ಮತ್ತೂ ಪರಂತು, ಯಾರೇ ವ್ಯಕ್ತಿಯು ಭೂಮಿಗೆ ಸಂಬಂಧಿಸಿದಂತೆ ಅವನು ಆರ್ಜಿಸಿದ ಪಾಲುಗಾರಿಕೆಯ ಹಕ್ಕನ್ನು ಈ ಉಪ-ಪ್ರಕರಣದ ಮೇರೆಗೆ ವರದಿ ಮಾಡಿದಾಗ, ಆ ವರದಿಯ ಜೊತೆಗೆ, ಅಂಥ ಭೂಮಿಯ ಅಳತೆಗಳನ್ನು ಮತ್ತು ಎಲ್ಲೆಗಳನ್ನು ತೋರಿಸುವ ನಕ್ಷೆಯನ್ನು ಮತ್ತು ಇತರ ಗೊತ್ತುಪಡಿಸಿದ ವಿವರಗಳನ್ನು ಲಗತ್ತಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಲೈಸೆನ್ಸ್ ಹೊಂದಿದ ಮೋಜಣಿದಾರನಿಂದ ನಕ್ಷೆಯನ್ನು ತಯಾರಿಸಿಕೊಳ್ಳತಕ್ಕದ್ದು.

**ವಿವರಣೆ 1:-** ಮೇಲೆ ಹೇಳಿದ ಹಕ್ಕುಗಳಲ್ಲಿ ಸ್ವಾಧೀನ ರಹಿತ ಅಡಮಾನವೂ ಸೇರುತ್ತದೆ, ಆದರೆ ಅನುಭೋಗದ ಹಕ್ಕುಗಳು ಅಥವಾ ಸ್ವತ್ತಿನ ವರ್ಗಾವಣೆ ಅಧಿನಿಯಮ, 1882 (ಕೇಂದ್ರ ಅಧಿನಿಯಮ 1882ರ 4)ರ 100ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅಡಮಾನವೆನಿಸದಿರುವ ಋಣ ಭಾರವು ಸೇರುವುದಿಲ್ಲ.

**ವಿವರಣೆ 2:-** ಯಾವ ವ್ಯಕ್ತಿಯ ಪರವಾಗಿ ಅಡಮಾನವು ವಿಮೋಚಿತವಾಗಿದೆಯೋ ಅಥವಾ ಇಲ್ಲವಾಗಿದೆಯೋ ಅಥವಾ ಗೇಣಿ ಕೊನೆಗೊಂಡಿದೆಯೋ ಅಂಥ ವ್ಯಕ್ತಿಯು ಈ ಪ್ರಕರಣದ ಅರ್ಥದಲ್ಲಿ ಹಕ್ಕನ್ನು ಆರ್ಜಿಸುತ್ತಾನೆ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಯಾವ ಅಧಿಕಾರಿಗೆ (1)ನೇ ಉಪಪ್ರಕರಣದ ಮೇರೆಗೆ ವರದಿ ಮಾಡಬಹುದೋ ಅಂಥ ಯಾರೇ ರೆವಿನ್ಯೂ ಅಧಿಕಾರಿಯನ್ನು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನೇಮಿಸಬಹುದು. ಆ ಸಂದರ್ಭದಲ್ಲಿ, ಅಂಥ ಅಧಿಕಾರಿಯು ಆ ವರದಿ ತಲುಪಿದ ಬಗ್ಗೆ ಹಾಗೆ ವರದಿ ಮಾಡುವ ವ್ಯಕ್ತಿಗೆ ಲಿಖಿತ ಸ್ವೀಕೃತಿಯನ್ನು ಕೊಡತಕ್ಕದ್ದು ಮತ್ತು ಆ ವರದಿಯನ್ನು ಸಂಬಂಧಪಟ್ಟ ಗ್ರಾಮದ ಗೊತ್ತುಪಡಿಸಿದ ಅಧಿಕಾರಿಗೆ ಕಳುಹಿಸತಕ್ಕದ್ದು.

(3) ಯಾರೇ ವ್ಯಕ್ತಿಯು (1)ನೇ ಅಥವಾ (2)ನೇ ಉಪಪ್ರಕರಣದ ಮೇರೆಗೆ

(ಎ) ಹಕ್ಕನ್ನು ಆರ್ಜಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ತರುವಾಯ ಆದರೆ ಒಂದು ವರ್ಷದ ಅವಧಿಯೊಳಗಾಗಿ, ವರದಿಯನ್ನು ಸಲ್ಲಿಸಿದರೆ ಎರಡು ರೂಪಾಯಿ ದಂಡವನ್ನು ಸಂದಾಯ ಮಾಡಿದ ಮೇಲೆ ವರದಿಯನ್ನು ಸ್ವೀಕರಿಸತಕ್ಕದ್ದು;

(ಬಿ) ಅಂಥ ಆರ್ಜನೆಯ ದಿನಾಂಕದಿಂದ ಒಂದು ವರ್ಷದ ಅವಧಿಯ ತರುವಾಯ,-

(i) ಗೊತ್ತುಪಡಿಸಿದ ಅಧಿಕಾರಿಗೆ (1)ನೇ ಉಪಪ್ರಕರಣದ ಮೇರೆಗೆ ವರದಿಯನ್ನು ಮಾಡಿದ್ದ ಸಂದರ್ಭದಲ್ಲಿ ತಹಶೀಲ್ದಾರನು ಮಾಡಬಹುದಾದ ಆದೇಶದ ಮೇರೆಗೆ; ಅಥವಾ

(ii) ರೆವಿನ್ಯೂ ಅಧಿಕಾರಿಗೆ (2)ನೇ ಉಪಪ್ರಕರಣದ ಮೇರೆಗೆ ವರದಿ ಮಾಡಿದ ಸಂದರ್ಭಧಲ್ಲಿ ಅಂಥ ಅಧಿಕಾರಿಯು ಮಾಡಬಹುದಾದ ಆದೇಶದ ಮೇರೆಗೆ;

-ಎರಡು ರೂಪಾಯಿಗೆ ಕಡಿಮೆಯಿಲ್ಲದ ಆದರೆ ಹತ್ತು ರೂಪಾಯಿಗೆ ಮೀರದ ದಂಡವನ್ನು ಸಂದಾಯ ಮಾಡಿದ ಮೇಲೆ ವರದಿಯನ್ನು ಸ್ವೀಕರಿಸತಕ್ಕದ್ದು.

(4) ಯಾವ ದಸ್ತಾವೇಜಿನ ಆಧಾರದ ಮೇಲೆ ಯಾವುದೇ ಭೂಮಿಯಲ್ಲಿ ಯಾರೇ ವ್ಯಕ್ತಿಯು ಹಿಡುವಳಿದಾರನಾಗಿ, ಅಧಿಭೋಗದಾರನಾಗಿ, ಒಡೆಯನಾಗಿ, ಅಡಮಾನ ಪಡೆದವನಾಗಿ, ಭೂಮಾಲೀಕನಾಗಿ, ಗೇಣಿದಾರನಾಗಿ ಅಥವಾ ಗೇಣಿಯನ್ನು ಅಥವಾ ಕಂದಾಯವನ್ನು ಪಡೆಯುವ ಹಕ್ಕನ್ನು ಪಡೆದವನಾಗಿ ಹಕ್ಕನ್ನು ಆರ್ಜಿಸುತ್ತಾನೋ ಅಂಥ ಯಾವುದೇ ದಸ್ತಾವೇಜನ್ನು ನೋಂದಣಿ ಫೀಜು ಸಂದಾಯಮಾಡಲು ಹೊಣೆಗಾರನಾಗಿರುವ ವ್ಯಕ್ತಿಯು ಹಕ್ಕು ದಾಖಲೆಯಲ್ಲಿ ಮತ್ತು 129ನೇ ಪ್ರಕರಣದಲ್ಲಿ ಹೇಳಿರುವ ರಿಜಿಸ್ಟರುಗಳಲ್ಲಿ ಅವಶ್ಯವಾದ ನಮೂನೆಗಳನ್ನು ಮಾಡುವುದಕ್ಕಾಗಿ ನಿಯಮಿಸಬಹುದಾದಂಥ ಫೀಜುಗಳನ್ನೂ ಸಹ ನೋಂದಣಿ ಪ್ರಾಧಿಕಾರಿಗೆ ಸಂದಾಯ ಮಾಡಿದ ಹೊರತು, ಭಾರತ ನೋಂದಣಿ ಅಧಿನಿಯಮ, 1908 (ಕೇಂದ್ರ ಅಧಿನಿಯಮ 1908ರ 12)ರ ಮೇರೆಗೆ ನೋಂದಾಯಿಸತಕ್ಕದ್ದಲ್ಲ; ಮತ್ತು ಅಂಥ ದಸ್ತಾವೇಜು ನೋಂದಣಿಯಾದ ಮೇಲೆ, ನೋಂದಣಿ ಪ್ರಾಧಿಕಾರಿಯು ಆ ಹಕ್ಕಿನ ಆರ್ಜನೆಯ ಬಗ್ಗೆ ಗೊತ್ತುಪಡಿಸಿದ ಅಧಿಕಾರಿಗೆ ವರದಿ ಮಾಡತಕ್ಕದ್ದು.

**XXX XXX XXX**

**129. ಹಕ್ಕು ಬದಲಾವಣೆಗಳ ನೋಂದಣಿ ಮತ್ತು ತಕರಾರು ಪ್ರಕರಣಗಳ ರಿಜಿಸ್ಟರು.-** (1) ಗೊತ್ತುಪಡಿಸಿದ ಅಧಿಕಾರಿಯು 128ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತನಗೆ ಸಲ್ಲಿಸಿದ ಅಥವಾ ಸದರಿ ಪ್ರಕರಣದ (2)ನೇ ಅಥವಾ (4)ನೇ ಉಪಪ್ರಕರಣದ ಮೇರೆಗೆ ತಾನು ಸ್ವೀಕರಿಸಿದ ಪ್ರತಿಯೊಂದು ವರದಿಯನ್ನೂ ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(2) ಗೊತ್ತುಪಡಿಸಿದ ಅಧಿಕಾರಿಯು ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿ ನಮೂದು ಮಾಡಿದಾಗ, ಅದೇ ಕಾಲದಲ್ಲಿ ನಮೂದಿನ ಒಂದು ಪೂರ್ಣ ಪ್ರತಿಯನ್ನು ಚಾವಡಿಯಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು ಮತ್ತು ಆ ಹಕ್ಕು ಬದಲಾವಣೆಯಲ್ಲಿ, ಹಿತಾಸಕ್ತಿ ಉಳ್ಳವರೆಂದು ಹಕ್ಕು ದಾಖಲೆಗಳಿಂದ ಅಥವಾ ಹಕ್ಕು ಬದಲಾವಣೆ ರಿಜಿಸ್ಟರಿನಿಂದ ಕಂಡು ಬರುವ ಎಲ್ಲ ವ್ಯಕ್ತಿಗಳಿಗೆ, ಮತ್ತು ಅದರಲ್ಲಿ ಹಿತಾಸಕ್ತಿ ಉಳ್ಳವನೆಂದು ನಂಬಲು ತನಗೆ ಕಾರಣವಿರುವ ಇತರ ಯಾರೇ ವ್ಯಕ್ತಿಗೆ ಲಿಖಿತ ತಿಳಿವಳಿಕೆಯನ್ನು ಕೊಡತಕ್ಕದ್ದು.

(3) ಹಕ್ಕು ಬದಲಾವಣೆಗಳ ರಿಜಿಸ್ಟರಿನಲ್ಲಿ (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ನಮೂದಿನ ಬಗ್ಗೆ ಗೊತ್ತುಪಡಿಸಿದ ಅಧಿಕಾರಿಗೆ ಮೌಖಿಕವಾಗಿ ಅಥವಾ ಬರಹದಲ್ಲಿ ಯಾವುದೇ ಆಕ್ಷೇಪಣೆ ಮಾಡಿದರೆ, ಆ ಆಕ್ಷೇಪಣೆಗಳ ವಿವರಗಳನ್ನು ತಕರಾರು ಪ್ರಕರಣಗಳ ರಿಜಿಸ್ಟರಿನಲ್ಲಿ ನಮೂದಿಸುವುದು ಗೊತ್ತುಪಡಿಸಿದ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

(4) ತಕರಾರು ಪ್ರಕರಣಗಳ ರಿಜಿಸ್ಟರಿನಲ್ಲಿ ನಮೂದಿಸಿದ ಆಕ್ಷೇಪಣೆಗಳನ್ನು ಮತ್ತು ವಿಚಾರಣೆಯ ಕಾಲದಲ್ಲಿ ಮಾಡಬಹುದಾದಂಥ ಇತರ ಆಕ್ಷೇಪಣೆಗಳನ್ನು ಗೊತ್ತುಪಡಿಸಬಹುದಾದಂಥ ಅಧಿಕಾರಿಯು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು ಮತ್ತು ಇತ್ಯರ್ಥಗೊಳಿಸತಕ್ಕದ್ದು. ಅಂಥ ಆಕ್ಷೇಪಣೆಗಳನ್ನು ಇತ್ಯರ್ಥ ಮಾಡಿದ ಆದೇಶಗಳನ್ನು, ಅಂಥ ಅಧಿಕಾರಿಯು ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿ ದಾಖಲಿಸತಕ್ಕದ್ದು.

(5) ಉಪಪ್ರಕರಣ (4)ರ ಮೇರೆಗೆ ವಿಚಾರಣೆ ನಡೆಸುವ ಅಧಿಕಾರಿಗೆ, ಈ ಅಧಿನಿಯಮದ ಮೇರೆಗೆ ವಿಧ್ಯುಕ್ತ ಅಥವಾ ಸಂಕ್ಷಿಪ್ತ ವಿಚಾರಣೆಯನ್ನು ಮಾಡುವಾಗ ರೆವಿನ್ಯೂ ಅಧಿಕಾರಿಗೆ IIIನೇ ಅಧ್ಯಾಯದ ಮೇರಗೆ ಇರುವ ಎಲ್ಲ ಅಧಿಕಾರಗಳು ಇರತಕ್ಕದ್ದು

(6) ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿರುವ ನಮೂದುಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಸಂದರ್ಭಾನುಸಾರ, ಸರಿಯೆಂದು ಕಂಡು ಬಂದ ಮೇಲೆ ಅಥವಾ ಸರಿಪಡಿಸಿದ ತರುವಾಯ, ಗೊತ್ತುಪಡಿಸಬಹುದಾದಂಥ ಅಧಿಕಾರಿಯು ಅವುಗಳನ್ನು ಪ್ರಮಾಣೀಕರಿಸತಕ್ಕದ್ದು.

(7) ಹಕ್ಕು ಬದಲಾವಣೆಗಳ ರಿಜಿಸ್ಟರಿನಿಂದ ಹಕ್ಕುದಾಖಲೆಗೆ ಗೊತ್ತುಪಡಿಸಿದ ರೀತಿಯಲ್ಲಿ ನಮೂದುಗಳ ವರ್ಗಾವಣೆಮಾಡತಕ್ಕದ್ದು: ಪರಂತು, ಹಕ್ಕು ಬದಲಾವಣೆಗಳ ರಿಜಿಸ್ಟರಿನಲ್ಲಿರುವ

ನಮೂದನ್ನು ಕ್ರಮಬದ್ಧವಾಗಿ ಪ್ರಮಾಣೀಕರಿಸುವವರೆಗೆ, ಅದನ್ನು ಹಕ್ಕು ದಾಖಲೆಗೆ ವರ್ಗಾಯಿಸತಕ್ಕದ್ದಲ್ಲ.

**XXX XXX XXX**

**130. ಮಾಹಿತಿಯನ್ನು ಒದಗಿಸಲು ಜವಾಬ್ದಾರಿ.-** (1) ಈ ಅಧ್ಯಾಯದ ಮೇರೆಗೆ ಯಾವ ವ್ಯಕ್ತಿಯ ಹಕ್ಕುಗಳನ್ನು, ಹಿತಾಸಕ್ತಿಗಳನ್ನು ಅಥವಾ ಹೊಣೆಗಳನ್ನು ಯಾವುದೇ ದಾಖಲೆಯಲ್ಲಿ ಅಥವಾ ರಿಜಿಸ್ಟರಿನಲ್ಲಿ ನಮೂದಿಸುವುದು ಅಗತ್ಯವಾಗಿದೆಯೋ ಅಥವಾ ನಮೂದಿಸಲಾಗಿದೆಯೋ ಅಂಥ ಯಾರೇ ವ್ಯಕ್ತಿಯು, ದಾಖಲೆಯನ್ನು ಅಥವಾ ರಿಜಿಸ್ಟರನ್ನು ಸಂಕಲನ ಮಾಡುವಲ್ಲಿ ಅಥವಾ ಪರಿಷ್ಕರಿಸುವಲ್ಲಿ ತೊಡಗಿದ ಯಾರೇ ಅಧಿಕಾರಿಯು ಕಡ್ಡಾಯವಾಗಿ ಕೋರಿದಾಗ, ಅವುಗಳ ಸರಿಯಾದ ಸಂಕಲನಕ್ಕೆ ಮತ್ತು ಪರಿಷ್ಕರಣಕ್ಕೆ ಅವಶ್ಯವಾದಂಥ ಮತ್ತು ತನಗೆ ತಿಳಿದಿರಬಹುದಾದ ಅಥವಾ ತನ್ನ ಸ್ವಾಧೀನದಲ್ಲಿರಬಹುದಾದ ಅಥವಾ ತನ್ನ ಅಧಿಕಾರಕ್ಕೊಳಪಟ್ಟಿರಬಹುದಾದಂಥ ಎಲ್ಲ ಮಾಹಿತಿಗಳನ್ನು ಅಥವಾ ದಸ್ತಾವೇಜುಗಳನ್ನು ಹಾಗೆ ಕಡ್ಡಾಯವಾಗಿ ಕೋರಿಕೆ ಕಳುಹಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅವನ ಪರಿಶೀಲನೆಗಾಗಿ ಒದಗಿಸಲು ಅಥವಾ ಹಾಜರುಪಡಿಸಲು ಬದ್ಧನಾಗಿರತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಕಡ್ಡಾಯವಾಗಿ ಕೋರಿದ್ದಾಗ ಯಾವ ಅಧಿಕಾರಿಗೆ ಮಾಹಿತಿಯನ್ನು ಒದಗಿಸಲಾಗಿದೆಯೋ ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲಾಗಿದೆಯೋ ಆ ಅಧಿಕಾರಿಯು ಅವುಗಳನ್ನು ಒದಗಿಸಿದ ಅಥವಾ ಹಾಜರುಪಡಿಸಿದ ವ್ಯಕ್ತಿಗೆ ಅವುಗಳುತಲುಪಿರುವ ಬಗ್ಗೆ ಲಿಖಿತ ಸ್ವೀಕೃತಿಯನ್ನು ಕೂಡಲೇ ಕೊಡತಕ್ಕದ್ದು ಅಥವಾ ಅಗತ್ಯಪಡಿಸಿದರೆ, ಅದರ ಪ್ರತಿಯನ್ನು ಇಟ್ಟುಕೊಂಡ ತರುವಾಯ ಕೂಡಲೇ ಅದನ್ನು ಮರಳಿಸಬಹುದು ಮತ್ತು ಅದನ್ನು ಹಾಜರುಪಡಿಸಿರುವುದನ್ನು ಮತ್ತು ಹಾಜರುಪಡಿಸಿದ ದಿನಾಂಕವನ್ನು ತೋರಿಸುವ ಟಿಪ್ಪಣಿಯನ್ನು ಅಂಥ ಯಾವುದೇ ದಸ್ತಾವೇಜಿನ ಮೇಲೆ ಬರೆದು ತನ್ನ ಸಹಿ ಹಾಕತಕ್ಕದ್ದು.

(3) ಉಪಪ್ರಕರಣ (1)ರ ಮೂಲಕ ಅಗತ್ಯಪಡಿಸಿದ ಮಾಹಿತಿಯನ್ನು ಅಥವಾ ದಸ್ತಾವೇಜನ್ನು ಸದರಿ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಒದಗಿಸಲು ಅಥವಾ ಹಾಜರುಪಡಿಸಲು ತಪ್ಪುವ ಯಾರೇ ವ್ಯಕ್ತಿಯು, ಇಪ್ಪತ್ತೈದು ರೂಪಾಯಿಗಳಿಗೆ ಮೀರದಂತೆ ತಹಶೀಲ್ದಾರನು ಗೊತ್ತುಪಡಿಸಬಹುದಾದ ದಂಡವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು ಮತ್ತು ದಂಡವಾಗಿ ಸಂದಾಯವಾಗಬೇಕಾಗಿರುವ ಮೊಬಲಗು ಭೂಕಂದಾಯದ ಬಾಕಿಯಂತೆ ವಸೂಲೀಯವಾಗಿರತಕ್ಕದ್ದು:

ಪರಂತು, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಯುಕ್ತವಾದ ಅವಕಾಶವನ್ನು ಕೊಡದೆ, ಈ ಉಪಪ್ರಕರಣದ ಮೇರೆಗೆ ಯಾವ ದಂಡವನ್ನೂ ವಿಧಿಸತಕ್ಕದ್ದಲ್ಲ.

**XXX XXX XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**SEVENTH SESSION**

# THE KARNATAKA LAND REVENUE (SECOND AMENDMENT) BILL, 2025
# (LA Bill No. 61 of 2025)

A Bill further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964), for the purposes hereinafter appearing;

Be it enacted by the Karnataka State Legislature in the seventy sixth year of the Republic of India, as follows:-

**1. Short title and commencement.-**(1) This Act may be called the Karnataka Land Revenue (Second Amendment) Act, 2025.

(2) It shall come in to effect at once.

**2. Amendment of section 127.-** In the Karnataka Land Revenue Act, 1964 (Karnataka Act 12 of 1914) (hereinafter referred the Principal Act) in section 127, in sub-section (1),-

(i) in clause (d), the words "including but not restricted to particulars of joint family members with respect to Jamma Bane holdings in *Kodagu* District", shall be inserted at the end;

(ii) after clause (d), as so amended the following shall be inserted, namely:-

"(e) such other additions, deletions and corrections in the manner prescribed with respect to Jamma Bane lands in Kodagu District, not inconsistent with the provisions of sub- section (20) of section 2, section 80 and sub-section (2) of section 79 and in accordance with the names of all occupants of a joint family".

**3. Amendment of section 128.-** In the Principal Act, in section 128,-

(i) in sub-section (1), after the words "gift, lease or otherwise," the words "including as a member of a joint family holding in Jamma Bane lands of *Kodagu* District", shall be inserted.

(ii) after sub-section (4), the following new sub-section shall be inserted, namely:-

"(5) The Government shall authorise the revenue officers in Kodagu District who, on receipt of an application or otherwise, and after such enquiry and examination of documents as prescribed, with respect to the acquisition of an interest by any person in any Jamma Bane holding together with other members of his joint family from 1st February 2013, shall provide a written acknowledgement to the applicant and other members of his joint family as reported".

**4. Amendment of section 129.-** In the Principal Act, in section 129, after sub-section (7), the following sub-section shall be inserted, namely:-

"(8) The authorised officer appointed by the Government for Jamma Bane holdings in *Kodagu* District shall make entries of any report submitted or application received under sub-section (4) of section 128, in the Register of Mutations and proceed in accordance with the provisions of sub-sections (2), (3), (4), (5), (6) and (7) of section 129".

**5**. **Amendment of section 130.-** In the Principal Act, in section 130, in sub-section (3), after the existing proviso, the following proviso shall be inserted, namely:-

"Provided further that, with respect to Jamma Bane lands in *Kodagu* District, such obligation shall extend to information and documents regarding family tree, survivorship, inheritance (notional or otherwise), alienation or privileges, mortgage, lease and particulars of the joint family".

**STATEMENT OF OBJECTS AND REASONS**

The system of Jamma Bane tenure is a special form of holding prevalent in Kodagu District, from other classes of land in the State. Historically, these lands have been held and enjoyed on the basis of customary rights by members of joint families, often without clear entries in the Record of Rights. With the passage of time, complications have arisen in maintaining accurate records of ownership, inheritance, survivorship and alienations pertaining to Jamma Bane holdings.

In particular, the absence of explicit provisions in the Karnataka Land Revenue Act, 1964 (Karnataka Act 12 of 1964), to record the rights of joint family members in such holdings has led to difficulties in mutation, registration, inheritance and maintenance of revenue records. Numerous disputes have emerged regarding succession, alienation and privileges attached to Jamma Bane lands, resulting in avoidable litigation and administrative delay.

It has therefore become necessary to provide statutory recognition of the peculiar nature of Jamma Bane tenure in Kodagu District and to ensure that the rights of all members of a joint family are duly recorded in the mutation and revenue registers. By specifically amending sections 127, 128, 129 and 130 of the Karnataka Land Revenue Act, 1964 (Karnataka Act 12 of 1964), to,-

(1) mandate inclusion of particulars of joint family members in the Register of Mutations in respect of Jamma Bane holdings;

(2) require reporting of acquisition of rights as members of a joint family in such lands;

(3) empower designated Revenue Officers in Kodagu District to enquire and acknowledge such rights; and

(4) provide for proper registration of such rights in the mutation register and ensure that relevant information relating to family tree, survivorship, inheritance and privileges is furnished;

These amendments seek to bring clarity, reduce litigation, and safeguard the rights of all stakeholders in Jamma Bane lands while maintaining conformity with other provisions of the Act.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**KRISHNA BYREGOWDA**
Minister for Revenue

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE KARNATAKA LAND REVENUE ACT, 1964

## (KARNATAKA ACT No. 12 OF 1964)

**XXX XXX XXX**

**127. Record of Rights.—(**1) A record or rights shall be prepared in the prescribed manner in respect of every village and such record shall include the following particulars:—

(a) the names of persons who are holders, occupants, owners, mortgagees, landlords or tenants of the land or assignees of the rent or revenue thereof;

(b) the nature and extent of the respective interest of such persons and the conditions or liabilities (if any) attaching thereto;

(c) the rent of revenue (if any) payable by or to any of such persons; and

(d) such other particulars as may be prescribed.

(2) The record of rights shall be maintained by such officers in such areas as may be prescribed and different officers may be prescribed for different areas.

(3) When the preparation of the record of rights referred to in sub-section (1) is completed in respect of any village, the fact of such completion shall be notified in the official Gazette and in such manner as may be prescribed.

**XXX XXX XXX**

**128. Acquisitions of rights to be reported.—(**1) Any person acquiring by succession, survivorship, inheritance, partition, purchase, mortgage, gift, lease or otherwise, any right as holder, occupant, owner, mortgagee, landlord or tenant of the land or assignee of the rent or revenue thereof, shall report orally or in writing his acquisition of such right to the prescribed officer of the village within three months from the date of such acquisition, and the said officer shall at once give a written acknowledgment of the receipt of the report to the person making it:

Provided that where the person acquiring the right is a minor or otherwise disqualified, his guardian or other person having charge of his property shall make the report to the prescribed officer:

Provided further that any person acquiring a right by virtue of a registered document shall be exempted form the obligation to report to the prescribed officer:

Provided also that any person reporting under this sub-section the acquisition by him of a right in partition in respect of the land shall annex with the report a sketch showing the metes and bounds and other prescribed particulars of

such land and such person shall get the sketch prepared by a licensed surveyor or as prescribed

**Explanation I.—**The rights mentioned above include a mortgage without possession but do not include an easement or a charge not amounting to a mortgage of the kind specified in section 100 of the Transfer of Property Act, 1882 (Central Act No. 4 of 1882).

**Explanation II.—**A person in whose favour a mortgage is discharged or extinguished or a lease determined acquires a right within the meaning of this section.

(2) Notwithstanding anything contained in sub-section (1), the State Government may, by notification, appoint any Revenue Officer to whom a report under sub-section (1) may be made, in which case such officer shall give a written acknowledgment of the receipt of such report to the person making it, and forward the report to the prescribed officer of the village concerned.

(3) If any person makes a report under sub-section (1) or sub-section (2),-

(a) after the period of three months but within the period of one year from the date of acquisition of the right, the report shall be received on payment of a penalty of two rupees;

(b) after a period of one year from the date of such acquisition, the report shall be received on payment of a penalty of not less than two rupees but not exceeding ten rupees, as may be ordered,—

(i) by the Tahsildar, in case the report is made under sub-section (1) to the prescribed officer, or

(ii) by the Revenue Officer, in case the report is made to such officer under subsection (2).

(4) No document by virtue of which any person acquires a right in any land as holder, occupant, owner, mortgagee, landlord or tenant or assignee of the rent or revenue thereunder, shall be registered under the Indian Registration Act, 1908 (Central Act 12 of 1908), unless the person liable to pay the registration fee also pays to the registering authority such fees as may be prescribed for making the necessary entries in the record of rights and registers referred to in section 129; and on the registration of such a document, the registering authority shall make a report of the acquisition of the right to the prescribed officer.

**XXX** **XXX** **XXX**

**129. Registration of mutations and register of disputed cases.—**(1) The prescribed officer shall enter in the Register of Mutations every report made to him under sub-section (1) of section 128 or received by him under sub-section (2) or sub-section (4) of the said section.

(2) Whenever a prescribed officer makes an entry in the Register of Mutations, he shall at the same time post up a complete copy of the entry in a conspicuous place in the chavadi and shall give written intimation to all persons appearing from the Record of Rights or Register of Mutations to be interested in the mutation, and to any other person whom he has reason to believe to be interested therein.

(3) Should any objection to any entry made under sub-section (1) in the Register of Mutations be made either orally or in writing to the prescribed officer, it shall be the duty of the prescribed officer to enter the particulars of the objection in a Register of Disputed Cases.

(4) The objections entered in the Register of Disputed Cases and such other objections as may be made during the enquiry shall be enquired into and disposed of by such officer and in such manner as may be prescribed. Orders disposing of such objections shall be recorded in the Register of Mutations by such officer.

(5) The officer holding an enquiry under sub-section (4) shall have all the powers under Chapter III, that a Revenue Officer has in making a formal or summary enquiry under this Act.

(6) Entries in the Register of Mutations shall be tested and if found correct or after correction, as the case may be, shall be certified by such officer as may be prescribed.

(7) The transfer of entries form the Registers of Mutations to the Record of Rights shall be effected in the prescribed manner, provided that an entry in the Register of Mutations shall not be transferred to the Record of Rights until such entry has been duly certified.

**XXX XXX XXX**

**130. Obligation to furnish information.—**(1) Any person whose rights, interests or liabilities are required to be or have been entered in any record or register, under this Chapter shall be bound, on the requisition of any officer engaged in compiling or revising the record or register, to furnish or produce for his inspection within thirty days from the date of such requisition, all such

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297


information or documents needed for the correct compilation or revision thereof, as may be within his knowledge or in his possession or power.

(2) An officer to whom any information is furnished or before whom any document is produced in accordance with a requisition under sub-section (1) shall at once give a written acknowledgment thereof to the person furnishing or producing the same or may return the same immediately after keeping a copy of it, if necessary and shall endorse on any such document a note under his signature, stating the fact of its production and the date thereof.

(3) Any person who fails to furnish information or produce the document required by subsection (1) within the period specified in the said sub-section shall be liable to pay a penalty not exceeding twenty-five rupees, as may be fixed by the Tahsildar and the amount payable as penalty shall be recoverable as an arrear of land revenue:

Provided that no penalty shall be imposed under this sub-section without giving to the person concerned a reasonable opportunity to be heard.

**XXX** **XXX** **XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH